ಹಾಲಿನ ಒಕ್ಕೂಟಗಳಲ್ಲಿ ಮಾರಟದ ವ್ಯವಸ್ಥೆ
54 : (83)

ಶ್ರೀ ರೇವಣ್ಣ ಹೆಚ್.ಡಿ.ಶಾಸಕರು,
ಹೊಳೇನರಸೀಪುರ ವಿಧಾನ ಸಭಾ ಕ್ಷೇತ್ರ

ಅ) ರಾಜ್ಯದಲ್ಲಿರುವ 13 ಹಾಲಿನ ಒಕ್ಕೂಟಗಳಲ್ಲಿ ಮಾರಾಟದ ವ್ಯವಸ್ಥೆಯಾಗದೇ 17 ಸಾವಿರ ಟನ್ ಹಾಲಿನ ಪುಡಿ ಹಾಗೂ 6 ಸಾವಿರಟನ್ ಬೆಣ್ಣೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಈ ಒಕ್ಕೂಟಗಳಿಗೆ ಮಾರಾಟವಾಗದೇ ಉಳಿದಿರುವ ಉತ್ಪನ್ನಗಳ ದಾಸ್ತಾನಿಂದಾಗಿ ಆಗಿರುವ ನಷ್ಟವೆಷ್ಟು : ಈ ನಷ್ಟವನ್ನು ಭರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು)

ಇ) ಹಾಲಿನ ಪುಡಿ ಹಾಗೂ ಬೆಣ್ಣೆಯನ್ನು ಸಕಾಲದಲ್ಲಿ ಮಾರಾಟ ಮಾಡದೇ ಇರಲು ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ (ಪೂರ್ಣಮಾಹಿತಿ ನೀಡುವುದು)

ಈ) ಮಾರಾಟವಾಗದೇ ಉಳಿದಿರುವ ದಾಸ್ತಾನಿನಿಂದಾಗಿ ಹಾಲು ಸರಬರಾಜು ಮಾಡಿದ ರೈತರಿಗೆ ತಿಂಗಳುಗಟ್ಟಲೆ ಪಣ ಬಟವಾಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಬಟವಾಡೆ ಮಾಡಲು ಬಾಕಿ ಇರುವ ಮೊತ್ತವೆಷ್ಟು : ಹಾಲು ಸರಬರಾಜು ಮಾಡಿದ ರೈತರಿಗೆ ಸಕಾಲದಲ್ಲಿ ಹಣ ಬಟವಾಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಉ) ದಿನಾಂಕ: 1-1-2012 ರಿಂದ 2-11-2012 ರ ವರೆವಿಗೂ ಹಾಲಿನಪುಡಿ ಹಾಗೂ ಬೆಣ್ಣೆಯ ಮಾರಾಟ ದರ ಪ್ರತಿ ಕೆ.ಜಿ.ಗೆ ಮಾರುಕಟ್ಟೆಯಲ್ಲಿ ಪ್ರತಿ ತಿಂಗಳು ಇದ್ದ ಬೆಲೆ ಎಷ್ಟು, ಇದರಿಂದ ಒಕ್ಕೂಟಗಳಿಗೆ ಆದ ನಷ್ಟವೆಷ್ಟು (ಪೂರ್ಣ ಮಾಹಿತಿ ನೀಡುವುದು) ?

ಶ್ರೀ ರೇವೂನಾಯಕ್ ಬೆಳಮಗಿ
(ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು).

ಅ) ಬಂದಿದೆ.

ಆ) ಹಾಲಿನ ಪುಡಿ ಉತ್ಪಾದನಾ ವೆಚ್ಚ ಪ್ರತಿ ಕೆ.ಜಿ.ಗೆ. ಸರಾಸರಿ ರೂ.183–30 ಅದೇ ರೀತಿ ಬೆಣ್ಣೆ ಉತ್ಪಾದನಾ ವೆಚ್ಚ ಪ್ರತಿ ಕೆ.ಜಿ.ಗೆ. 170/– ಇರುತ್ತದೆ. ದೇಶದಾದ್ಯಂತ ಹಾಲಿನ ಪುಡಿ ಉತ್ಪಾದನೆ ಹೆಚ್ಚಾಗಿದ್ದು ಬೇಡಿಕೆ ಇರುವುದಿಲ್ಲ. ಕರ್ನಾಟಕ ಹಾಲು ಮಹಾ ಮಂಡಳದ ಟಂಡರ್ ನಲ್ಲಿ ಪ್ರತಿ ಕೆ.ಜಿ.ಗೆ. ದರ 118/– ರಿಂದ 120/– ರ ವರೆಗೆ ಬಂದಿದ್ದು, ದರ ಕಡಿಮೆಯಾದ ಕಾರಣದಿಂದ ನಷ್ಟವನ್ನು ತಪ್ಪಿಸುವ ಉದ್ದೇಶದಿಂದ ಹಾಲಿನ ಪುಡಿಯನ್ನು ಮಾರಾಟ ಮಾಡದೇ ದಾಸ್ತಾನು ಇಡಲಾಗಿತ್ತು. ಇತ್ತೀಚಿನ ದಿನಗಳಲ್ಲಿ ದರಗಳು ಹೆಚ್ಚಾಗುತ್ತಿದ್ದು, ಉತ್ತಮ ದಾರದಲ್ಲಿ ಹಾಲಿನ ಪುಡಿಯನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪೂರ್ಣ ಪ್ರಮಾಣದಲ್ಲಿ ಉತ್ಪನ್ನಗಳು ಮಾರಾಟವಾದ ನಂತರವಷ್ಟೇ ನಷ್ಟವನ್ನು ನಿಖರವಾಗಿ ಹೇಳಲು ಸಾಧ್ಯವಿರುತ್ತದೆ. ಒಕ್ಕೂಟಗಳಿಗೆ ಹಾಲಿನ ಪುಡಿ ಮಾರಾಟದಲ್ಲಿ ಆಗುವ ನಷ್ಟದಲ್ಲಿ ಶೇ 50 ರಷ್ಟನ್ನು ಸರ್ಕಾರದಿಂದ ಭರಿಸಲಾಗುವುದು.

ಇ) ದೇಶಾದದ್ಯಂತ ಹಾಲಿನ ಪುಡಿ ಉತ್ಪಾದನೆ ಹೆಚ್ಚಾದ ಕಾರಣ ಬೇಡಿಕೆ ಇಲ್ಲವಾಗಿದ್ದು, ಮಾರಾಟ ಮಾಡಲಾಗಿಲ್ಲ. ಇದಕ್ಕೆ ಯಾವುದೇ ಅಧಿಕಾರಿಗಳು ವೈಯುಕ್ತಿಕವಾಗಿ ಕಾರಣಕರ್ತರಾಗಿರುವುದಿಲ್ಲ.

ಈ) ಬಂದಿದೆ. ಬಾಕಿ ಇರುವ ಮೊತ್ತ ಅಂದಾಜು ರೂ. 130.00 ಕೋಟಿ. ಹಾಲು ಸರಬರಾಜು ಮಾಡಿದ ರೈತರಿಗೆ ಸಕಾಲದಲ್ಲಿ ಹಣ ಬಟವಾಡೆ ಮಾಡಲು ಹಾಲು ಒಕ್ಕೂಟಗಳು ಬ್ಯಾಂಕಿನಿಂದ ಸಾಲ ಪಡೆದಲ್ಲಿ ಸಾಲದ ಮೇಲಿನ ಶೇ. 4 ರ ಮೇಲ್ಪಟ್ಟ ಬಡ್ಡಿಗೆ ಸರ್ಕಾರದಿಂದ ರಿಯಾಯಿತಿ ನೀಡಲಾಗುವುದು.

ಉ) ಹಾಲಿನ ಪುಡಿ (ಎಸ್ಎಂಪಿ) ಮತ್ತು ಬೆಣ್ಣೆಯನ್ನು ಸಗಟು ಉತ್ಪನ್ನ ವಿಲೇವಾರಿ ಉಪ ಸಮಿತಿ ಸಭೆಯ ಶಿಫಾರಸ್ಸಿನಂತೆ ಮಾರುಕಟ್ಟೆಯಲ್ಲಿ

ಲಭ್ಯವಿರುವ ಉತ್ತಮ ದರಗಳಲ್ಲಿ ಮಾರಾಟ ಮಾಡಿದ್ದು, ವಿವರಗಳು ಈ ಕೆಳಕಂಡಂತಿದೆ.

ಟೆಂಡರ ದಿನಾಂಕ	ಉತ್ಪನ್ನ	ಟೆಂಡರ್ ದಿನಾಂಕ ರಂದು ದಾಸ್ತಾನು (ಮೆ.ಟ)	ಟೆಂಡರ್ ನಲ್ಲಿ ಪಡೆದ ದರ	ಉತ್ಪಾದನಾ ವೆಚ್ಚ ರೂ/ಕೆ.ಜಿ	ವ್ಯತ್ಯಾಸ	ಪೂರ್ಣ ದಾಸ್ತಾನನ್ನು ಮಾರಾಟ ಮಾಡಿದಲ್ಲಿ ಉಂಟಾಗುವ ನಷ್ಟ (ರೂ. ಕೋಟಿಗಳಲ್ಲಿ)
10–4–12	ಎಸ್ಎಂಪಿ	3150	120.00	180.00	60.00	18.90
	ಬೆಣ್ಣೆ	3210	171.00	170.00	–	–
26–6–12	ಎಸ್ಎಂಪಿ	6724	121.00	180.00	59.00	39.67
	ಬೆಣ್ಣೆ	3712	179.20	170.00	–	–
14–8–12	ಎಸ್ಎಂಪಿ	11259	120.00	180.00	60.00	67.55
	ಬೆಣ್ಣೆ	3551	176.50	170.00	–	–
15–9–12	ಎಸ್ಎಂಪಿ	12883	121.51	180.00	58.49	75.35
	ಬೆಣ್ಣೆ	4040	179.00	170.00	–	–
25–10–12	ಎಸ್ಎಂಪಿ	15230	118.00	180.00	62.00	94.43
	ಬೆಣ್ಣೆ	4620	167.50	170.00	–	–

ಪಶು ವೈದ್ಯಕೀಯ ಆಸ್ಪತ್ರೆಗಳು

56 : (85)

ಶ್ರೀ ರೇವಣ್ಣ, ಹೆಚ್.ಡಿ. (ಹೊಳೆನರಸೀಪುರ)

ಅ) ರಾಜ್ಯದಲ್ಲಿರುವ ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಗಳೆಷ್ಟು ಹಾಗೂ ಮಂಜೂರಾತಿಯಾಗಿರುವ ಪಶುವೈದ್ಯರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ರಾಜ್ಯಾದ್ಯಾಂತ ಖಾಲಿ ಇರುವ ಪಶುವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು? ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು);